ಶ್ರೀ ಡಿ.ಕೆ. ಶಿವಕುಮಾರ್:– Ok. Thank you. ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಯವರು ಟೀಮ್ ಅನ್ನು ಕಳುಹಿಸಿಕೊಡುತ್ತೇನೆಂದು ಭರವಸೆ ಕೊಟ್ಟಿದ್ದಾರೆ. ಅದು ಆಗಲಿಲ್ಲವೆಂದರೆ ಇದನ್ನು ಭರವಸೆಗಳ ಸಮಿತಿಗೆ ಹಾಕುತ್ತಿದ್ದೇನೆ.

ಶ್ರೀ ಎಸ್. ಸುರೇಶ್‌ಕುಮಾರ್:– ಮಾನ್ಯ ಶಿವಕುಮಾರ್‌ರವರೆ, ದಯವಿಟ್ಟು ಮಗು ಹುಟ್ಟುವುದಕ್ಕಿಂತ ಮುಂಚೆ obituary ಅನ್ನು ಬರೆಯಬೇಡಿ.

126 (762) ಶ್ರೀ ಪಾಟೀಲ್ ವಿ.ಎಸ್. (ಯಲ್ಲಾಪುರ):– ಮಾನ್ಯ ಸಮಾಜ ಕಲ್ಯಾಣ ಸಚಿವರು ದಯಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಉತ್ತರ ಕನ್ನಡ ಜಿಲ್ಲೆಯಲ್ಲಿ ಹಿಂದುಳಿದ ವರ್ಗಗಳ ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆಯ ವಸತಿ ನಿಲಯಗಳ ಪರಿವೀಕ್ಷಣೆಯನ್ನು ಜಿಲ್ಲಾ ಹಿಂದುಳಿದ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಅಧಿಕಾರಿ, ಕಾರವಾರ ಇವರು 2009–10ನೇ ಸಾಲಿನಲ್ಲಿ ಯಾವ ಯಾವ ದಿನಾಂಕಗಳಂದು ಆಕಸ್ಮಿಕವಾಗಿ ಪರಿಶೀಲಿಸಿದ್ದಾರೆ:

ಆ) ಪರಿಶೀಲಿಸಿದಾಗ ಕಂಡು ಬಂದ ನ್ಯೂನತೆಗಳೇನು ಹಾಗೂ ಕೈಗೊಂಡ ಸುಧಾರಣೆಯ ಕ್ರಮಗಳು ಯಾವುವು?

ಶ್ರೀ ಡಿ. ಸುಧಾಕರ್ (ಸಮಾಜ ಕಲ್ಯಾಣ ಸಚಿವರು):–

ಅ) ಜಿಲ್ಲಾ ಹಿಂದುಳಿದ ವರ್ಗಗಳ ಅಧಿಕಾರಿಗಳು, ಉತ್ತರ ಕನ್ನಡ ಜಿಲ್ಲೆ ಇವರು 2009–10ನೇ ಸಾಲಿನಲ್ಲಿ ಕೆಳಕಂಡ ದಿನಾಂಕಗಳಂದು ಆಕಸ್ಮಿಕ ಭೇಟಿ ನೀಡಿ ವಿದ್ಯಾರ್ಥಿನಿಲಯಗಳ ಪರಿವೀಕ್ಷಣೆಯನ್ನು ಮಾಡಿರುತ್ತಾರೆ.

22-05-2009, 17-06-2009, 19-06-2009, 20-06-2009, 25-06-2009, 30-06-2009, 07-07-2009, 15-07-2009, 30-07-2009, 18-08-2009, 31-08-2009, 02-09-2009, 08-09-2009, 09-09-2009, 16-09-2009, 24-10-2009, 31-10-2009, 20-11-2009, 24-11-2009, 09-12-2009,

05-01-2010, 12-01-2010, 16-01-2010, 04-02-2010, 10-02-2010, 20-02-2010, 08-03-2010.

ಆ) ವಸತಿನಿಲಯಗಳ ಪರಿವೀಕ್ಷಣೆಯನ್ನು ಮಾಡಿದಾಗ, ಕೆಲವು ವಸತಿನಿಲಯಗಳಲ್ಲಿ ಸರಿಯಾದ ಸ್ವಚ್ಛತೆ ಇಲ್ಲದೇ ಇರುವುದು, ಸಾಕಷ್ಟು ಬೆಳಕಿನ ಅವಕಾಶ ಮಾಡದೇ ಇರುವುದು, ಕಾಂಪೌಂಡ್ ಗೋಡೆ ಇಲ್ಲದೇ ಇರುವುದು, ಮೆನು ಚಾರ್ಟ್ ಹಾಕದೇ ಇರುವುದು, ಕೈತೋಟ ನಿರ್ವಹಣೆ ಮಾಡದೇ ಇರುವುದು, ನೀರಿನ ಸಮಸ್ಯೆ, ಆಹಾರದ ಗುಣಮಟ್ಟ ತೃಪ್ತಿಕರವಾಗಿಲ್ಲದೇ ಇರುವುದು, ಬಾಡಿಗೆ ಕಟ್ಟಡಗಳಲ್ಲಿರುವ ವಸತಿನಿಲಯಗಳಿಗೆ ಸ್ವಂತ ಕಟ್ಟಡಗಳನ್ನು ನಿರ್ಮಾಣ ಮಾಡಲು ನಿವೇಶನ ಸಮಸ್ಯೆ, ಎಸ್.ಎಸ್.ಎಲ್.ಸಿ. ವಿದ್ಯಾರ್ಥಿಗಳ ಮಾಸಿಕ ಪರೀಕ್ಷೆಯಲ್ಲಿ ಪ್ರಗತಿ ಕಡಿಮೆ ಇರುವುದು ಇತ್ಯಾದಿ ಸಮಸ್ಯೆಗಳನ್ನು ತಪಾಸಣಾ ವೇಳೆಯಲ್ಲಿ ಜಿಲ್ಲಾ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಅಧಿಕಾರಿಗಳು ಗಮನಿಸಿರುತ್ತಾರೆ.

ಸದರಿ ಸಮಸ್ಯೆಗಳನ್ನು ಬಗೆಹರಿಸಲು ಕೆಲವು ಪ್ರಕರಣಗಳಲ್ಲಿ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗಿದೆ ಮತ್ತು ಉಳಿದ ಸಮಸ್ಯೆಗಳ ಬಗ್ಗೆ ಕ್ರಮ ಕೈಗೊಳ್ಳಲಾಗುತ್ತಿದೆ.

ಶ್ರೀ. ವಿ.ಎಸ್. ಪಾಟೀಲ್:– ಮಾನ್ಯ ಅಧ್ಯಕ್ಷರೆ, ಸರ್ಕಾರ ಉತ್ತರದಲ್ಲಿ date ಗಳನ್ನು ಕೊಟ್ಟಿದ್ದಾರೆ. ಅದನ್ನು visit book ನಲ್ಲಿ entry ಮಾಡಿಲ್ಲ. ನಾನು ಸಾಕಷ್ಟು ಸಲ ಹಾಸ್ಟೆಲ್‌ಗೆ visit ಮಾಡಿದಾಗ date ಏನು ಕೊಟ್ಟಿದ್ದಾರೆ, ಅದು visit book ನಲ್ಲಿ ಬಂದಿಲ್ಲ ಮತ್ತೆ ನಮ್ಮ ಕ್ಷೇತ್ರ ಮಲೆನಾಡಿನ ಭಾಗವಾಗಿರುವುದರಿಂದ ಹಾಸ್ಟೆಲ್‌ನಲ್ಲಿ lightನ ಸಮಸ್ಯೆ, ಸರಿಯಾದ ಸ್ವಚ್ಛತೆ ಇಲ್ಲ, ಸುತ್ತಲೂ compound ಇಲ್ಲ, ಹೀಗಾಗಿ ಅಲ್ಲಿನ ಮಕ್ಕಳಿಗೆ ಸಾಕಷ್ಟು ತೊಂದರೆಯಾಗುತ್ತಿದೆ.

ಶ್ರೀ ಡಿ. ಸುಧಾಕರ್:– ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಿಗೆ ಉತ್ತರವನ್ನು ಒದಗಿಸಲಾಗಿದೆ. ಇದರ ಜೊತೆಯಲ್ಲಿ ಮಾನ್ಯ ಸದಸ್ಯರು compound ಮತ್ತು ಇನ್ನಿತರ ವಿಷಯಗಳ ಬಗ್ಗೆ ಪ್ರಶ್ನೆಗಳನ್ನು ಕೇಳಿದ್ದಾರೆ. ನಾವು ಈ compound ಅನ್ನು NREG ಯಲ್ಲಿ ಮಾಡಬಹುದು. ನಾವೆಲ್ಲಾ ನಮ್ಮ ಕ್ಷೇತ್ರಗಳಲ್ಲಿ NREG ಯಲ್ಲಿ compound ಗಳನ್ನು ಮಾಡುತ್ತಿದ್ದೇವೆ. ಇಲ್ಲಿ NREG ಯಲ್ಲಿ ಮಾಡುವುದಕ್ಕೆ ತೊಂದರೆಯಾದರೆ ನಮ್ಮ ಇಲಾಖೆಯಿಂದ ಮಾಡಿಸಿಕೊಡುತ್ತೇನೆಂಬ ಭರವಸೆಯನ್ನು ಕೊಡಲು ಬಯಸುತ್ತೇನೆ. ಇದರ ಜೊತೆಗೆ ಅಲ್ಲಿ ಏನೇನು ಗುಣಮಟ್ಟವಿಲ್ಲ, ಅದನ್ನು ಕೂಡ ಶೀಘ್ರವಾಗಿ ಸರಿಪಡಿಸುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇನೆಂದು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ಹೇಳಬಯಸುತ್ತೇನೆ.

ಶ್ರೀ ವಿ.ಎಸ್. ಪಾಟೀಲ್:– ಮಾನ್ಯ ಅಧ್ಯಕ್ಷರೆ, ಅಲ್ಲಿ NREG ಅಡಿಯಲ್ಲಿ ಕೆಲಸ ಮಾಡುವುದಕ್ಕೆ ಬರುವುದಿಲ್ಲ. ಅದಕ್ಕೆ ವಿಶೇಷ ಅನುದಾನವನ್ನು ಕೊಡಬೇಕು.

ಶ್ರೀ ಡಿ. ಸುಧಾಕರ್:– ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಏನು ವಿಷಯ ಪ್ರಸ್ತಾಪ ಮಾಡಿದ್ದಾರೆ. ಅದನ್ನು ಮಾಡಿಸಿ ಕೊಡುತ್ತೇನೆಂದು ನಾನು ಭರವಸೆಯನ್ನು ಕೊಡುತ್ತೇನೆ.

ತೇರವಾಳ ಕ್ಷೇತ್ರದಲ್ಲಿ ಅಂಗನವಾಡಿ ಕಟ್ಟಡಗಳನ್ನು ಮಂಜೂರು ಮಾಡುವ ಬಗ್ಗೆ

127 (1104) ಶ್ರೀ ಸಿದ್ದು ಸವದಿ (ತೇರವಾಳ) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು ದಯಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ತೇರವಾಳ ಮತ ಕ್ಷೇತ್ರದಲ್ಲಿರುವ ಅಂಗನವಾಡಿಗಳೆಷ್ಟು; ಅವುಗಳಲ್ಲಿ ಸ್ವಂತ ಕಟ್ಟಡಗಳೆಷ್ಟು; ಉಳಿದವುಗಳಿಗೆ ಯಾವಾಗ ಕಟ್ಟಡಗಳನ್ನು ಕಟ್ಟಿಸಲಾಗುವುದು;

ಆ) ಅತ್ಯಂತ ಚಿಕ್ಕ ಮಕ್ಕಳು ಈ ಶಾಲೆಗಳಲ್ಲಿ ಇರುವುದರಿಂದ ಅನೇಕ ಅಂಗನವಾಡಿಗಳನ್ನು ಮರದ ಕೆಳಗೋ, ಗುಡಿಸಲುಗಳಲ್ಲೋ ಅಥವಾ ಒಡಕು ಕೋಣೆಗಳಲ್ಲೋ ನಡೆಸುತ್ತಿದ್ದು, ಆ ಮಕ್ಕಳಿಗೆ ಅಭದ್ರತೆ ಆಗುವುದಿಲ್ಲವೇ;

ಇ) ಹಾಗಿದ್ದಲ್ಲಿ, ಎಲ್ಲಾ ಅಂಗನವಾಡಿ ಶಾಲೆಗಳ ಕಟ್ಟಡಗಳನ್ನು ಒಮ್ಮೆಲೇ ಕಟ್ಟಿಸಲಾಗುವುದೇ?

ಶ್ರೀ ಪಿ.ಎಂ. ನರೇಂದ್ರಸ್ವಾಮಿ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು):–

ಅ) ತೇರವಾಳ ಮತ ಕ್ಷೇತ್ರದಲ್ಲಿ 275 ಅಂಗನವಾಡಿಗಳಿವೆ. ಅವುಗಳಲ್ಲಿ 66 ಮುಧೋಳ ತಾಲ್ಲೂಕಿಗೆ ಹಾಗೂ 209 ಜಮಖಂಡಿ ತಾಲ್ಲೂಕಿಗೆ ಸೇರಿರುತ್ತವೆ. 106 ಕೇಂದ್ರಗಳಿಗೆ ಸ್ವಂತ ಕಟ್ಟಡಗಳಿರುತ್ತವೆ. ಉಳಿದ ಅಂಗನವಾಡಿ ಕೇಂದ್ರಗಳಿಗೆ ನಿವೇಶನ ಮತ್ತು ಅನುದಾನದ